**<u>ದಿನಾಂಕ:22-09-2023 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>:ಪಾಟೀ ಸವಾಲುಃ 14 ಮತ್ತು 15 ನೇ ಪ್ರತಿವಾದಿ ಪರ ಶ್ರೀ.ಎನ್ ಎಸ್ ಡಿ ವಕೀಲರಿಂದ :</u>**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಶಿವಮೊಗ್ಗದಲ್ಲಿರುವ ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ಆ ಮನೆ ನಂಬರ ನನಗೆ ಗೊತ್ತಿಲ್ಲ. ಶಿವಮೊಗ್ಗದ ಕೆರಪುರಂ ಬಡಾವಣೆಯಲ್ಲಿ ನಾನು ಮತ್ತು ನನ್ನ ತಂದೆಯವರು ಕೂಡಿ ಒಂದು ಮನೆಯನ್ನು ಖರೀದಿಸಿರುವುದಿಲ್ಲ. ಈಗ ತೋರುತ್ತಿರುವ ಒಂದು ಕ್ರಯ ಪತ್ರದ ದೃಢಿಕೃತ ನಕಲಿನಲ್ಲಿರುವ ಸಹಿ ನನ್ನದಾಗಿರುವುದಿಲ್ಲ. ಈಗ ತೋರುತ್ತಿರುವ ಕ್ರಯ ಪತ್ರದಲ್ಲಿರುವ ಆಸ್ತಿಯನ್ನು ನಾನು ಮತ್ತು ನನ್ನ ತಂದೆಯವರು ಕೂಡಿಯೇ ಖರೀದಿಸಿದ್ದೇವೆ ಎಂದರೆ ಸರಿಯಲ್ಲ.

1993 ರಲ್ಲಿ ನಮ್ಮ ಕುಟುಂಬದಲ್ಲಿ ಆದ ವಾಟ್ನಿಯ ನಂತರ ದಾವಾ ಸರ್ವೇ ನಂಬರ 216/1 ಮತ್ತು 216/2 ರ ಆಸ್ತಿಗಳನ್ನು 2 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದ್ದು, ಆ ಆಸ್ತಿಯನ್ನು ಪ್ರತಿವಾದಿ 14 ಮತ್ತು 15 ರವರು 2 ನೇ ಪ್ರತಿವಾದಿಯಿಂದ ಖರೀದಿಸಿದರು ಎಂದರೆ ಸರಿಯಲ್ಲ. ಆ ಆಸ್ತಿಯಲ್ಲಿ ಸ್ವಲ್ಪ ಭಾಗದ ಆಸ್ತಿಯನ್ನು ತನ್ನ ಹೆಂಡತಿ 13 ನೇ ಪ್ರತಿವಾದಿಯ ಹೆಸರಿಗೆ ಬಕ್ಷಿಸ್ ಪತ್ರದ ಮೂಲಕ ಬಿಟ್ಟುಕೊಟ್ಟನು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(14 ಮತ್ತು 15 ನೇ ಪ್ರತಿವಾದಿ ಪರ ಉಳಿದ ಪಾಟೀ ಸವಾಲನ್ನು ಪ್ರತಿವಾದಿ 8 ರಿಂದ 12 ರವರ ಪರ ವಕೀಲರು ಮಾಡಲಾದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವಂತೆ ಕೋರಿರುತ್ತಾರೆ.)**

: **ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ